ರತ್ನಾಕರ ಬಿ. ಕದಮ ಸಂಪಾದಕತ್ವದಲ್ಲಿ......

RNI- KARKAN/2017/76544

# ಪ್ರಚಂಡ ವಾಣಿ

ಕನ್ನಡ ವಾರ ಪತ್ರಿಕೆ

Mobile : 9620159720 / 9353340153

PRACHANDA VANI Kannada Weekly

ಬೆಳಗಾವಿ, ಬಾಗಲಕೋಟ, ವಿಜಯಪೂರ, ಧಾರವಾಡ, ಕಾರವಾರ, ಹಾವೇರಿ.

**Date-12-09-2025**






ಸೈಬರ್ ಭದ್ರತೆಯು ಕೂಡಾ ಜೀವನದ ಮುಖ್ಯ ಉದ್ದೇಶ ಎಂದು ಪುಣೆಯ ಕ್ವಿಕ್ ಹೀಲ್ ಪೌಂಡೇಶನ್ ಹಾಗೂ ನಿಡಿಸೋಸಿಯ ಎಸ್‌ಜಿಪಿಎನ್ ಬಿಸಿಎ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನಡೆದ ಸೈಬರ್ ಸುರಕ್ಷತೆ ಕಾರ್ಯಾಗಾರದಲ್ಲಿ ಅನಕ್ಷರಸ್ಥರು ಮಾತ್ರವಲ್ಲ ಅಕ್ಷರಸ್ಥರೂ ಸೈಬರ್ ವಂಚನೆಗೆ ಒಳಗಾಗುತ್ತಿರುವುದು ಆತಂಕಕಾರಿಯೆ ಎಂದು ಸೈಬರ್ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಸಂಕೇಶ್ವರದಲ್ಲಿ ನಡೆಯುತ್ತಿದ್ದ ದನಗಳ ಸಂತೆಗೆ ಬೇಟಿ ನೀಡಿದ ವಿಧ್ಯಾರ್ಥಿಗಳ ತಂಡವು ಸಂತೆಗೆ ಸೇರಿದ್ದ ಜನರಿಗೆ ಸೈಬರ್ ವಂಚನೆ ಎಂದರೆ ಏನು?, ಸೈಬರ್ ವಂಚಕರು ಯಾವ ರೀತಿಯಾಗಿ ವಂಚನೆ ಮಾಡಬಹುದು, ವಂಚನೆಗಳಿಂದ ಹೇಗೆ ನಾವು ಭದ್ರವಾಗಿರಬೇಕು ಎಂದು ಅರಿವು ಮೂಡಿಸುವ ಕಾರ್ಯವನ್ನು ಮಾಡಿದ್ದಾರೆ. ಪೊಲೀಸ್ ಇಲಾಖೆ, ರಾಜ್ಯ ಸರಕಾರ ಹಾಗೂ ಕೆಂದ್ರ ಸರಕಾರ ಸೈಬರ್ ವಂಚನೆ ತಡೆಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿವೆ. ಆದರೂ ಜನರು ವಂಚನೆಗೆ ಒಳಗಾಗುತ್ತಿದ್ದಾರೆ. ಹಾಗಾಗಿ, ಒಟಿಪಿ, ಹುಸಿಲಿಂಕ್‌ಗಳ ಬಗ್ಗೆ ಎಚ್ಚರವಿರಬೇಕು ಎಂದರು. ಈ ಒಂದು ಕಾರ್ಯಾಗಾರದಲ್ಲಿ ಬಸವರಾಜ ಹಾಲಭಾವಿ, ಪವನ್ ಹಿರೇಮಠ, ಆನಂದ ಸೋನಾರ್, ಮಹಾಂತೇಶ ಪಾಟೀಲ ಹಾಗೂ ಕರ್ನಾಟಕ ಪೊಲೀಸ್ ಇಲಾಖೆಯ ವತಿಯಿಂದ ರವಿ ...... ಇತರರಿದ್ದರೂ ಎಂದು ತಿಳಿಸಿದ್ದಾರೆ.